ಈ) ಯೋಜನೆ ತ್ವರಿತವಾಗಿ ಮುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಇಂಡಿ ಏತ ನೀರಾವರಿ ಯೋಜನೆಯನ್ನು 1999–2000 ರಲ್ಲಿ ಪ್ರಾರಂಭಿಸಲಾಗಿದೆ ಈ ಯೋಜನೆಯನ್ನು 2007 ರೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ

ಆ) ಜಾಕ್‌ವೆಲ್ ಕಾಮಗಾರಿಯ ಅಡಿಪಾಯ ಹಾಗೂ ತಡೆಗೋಡೆಯ ವಿನ್ಯಾಸವನ್ನು ಅಂತಿಮಗೊಳಿಸುವಲ್ಲಿ ಉಂಟಾಗಿರುವ ವಿಳಂಬ, ಸ್ಥಳೀಯ ಮತ್ತು ತಾಂತ್ರಿಕ ಕಾರಣಗಳಿಂದಾಗಿ ಹಾಗೂ ಕಾಲುವೆ ಜಾಲದ ಕಾಮಗಾರಿಗಳ ವಿನ್ಯಾಸದ ಪರಿಷ್ಕರಣೆಯಿಂದ ಉಂಟಾಗಿರುವ ಹೆಚ್ಚಿನ ಪರಿಮಾಣ ನಿರ್ವಹಿಸುವಲ್ಲಿ ಆಗಿರುವ ವಿಳಂಬ ಮುಂತಾದವುಗಳಿಂದ ಯೋಜನೆಯ ಅನುಷ್ಠಾನದಲ್ಲಿನ ವಿಳಂಬವಾಗಿರುತ್ತದೆ

ಇ) ಈ ಯೋಜನೆಗೆ ಡಿಸೆಂಬರ್ 2006ರ ವರೆಗೆ ರೂ 30,546 90 ಲಕ್ಷಗಳು ವೆಚ್ಚವಾಗಿರುತ್ತದೆ

ಈ) ಈ ಯೋಜನೆಯ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು, ಬಾಕಿ ಉಳಿದ ಕಾಮಗಾರಿಗಳನ್ನು ಮಾರ್ಚ್ 2007 ರೊಳಗಾಗಿ ಮುಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ

994 (1176) ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸಿಂಧಗಿ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಪ್ರಥಮ ದರ್ಜೆ ಕಾಲೇಜುಗಳಿವೆ,

ಆ) ಸಿಂಧಗಿ ವಿಧಾನಸಭಾ ಕ್ಷೇತ್ರದಲ್ಲಿ ದೇವರ ಹಿಪ್ಪರಗಿ ಮತ್ತು ಸಿಂಧಗಿಯಲ್ಲಿ ಪ್ರಥಮ ದರ್ಜೆ ಕಾಲೇಜಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಬಂದಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಬಿ ಪಿ ಪೋರವಾಲ ಕಲಾ ಮತ್ತು ವಾಣಿಜ್ಯ ಕಾಲೇಜು ಮತ್ತು ಸಾಲಿಮರ ವಿಜ್ಞಾನ ಕಾಲೇಜು, ಸಿಂಧಗಿ ಹಾಗೂ ಸಿ ಎಂ ಮನಗೂಳಿ ಕಲಾ ಕಾಲೇಜು, ಸಿಂಧಗಿ

ಆ) ಬಂದಿದೆ

ಇ) ಪರಿಶೀಲನೆಯಲ್ಲಿದೆ

995 (1113) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಭದ್ರಾ ಜಲಾಶಯ ನಾಲೆಯ ಆಧುನೀಕರಣ ಕಾಮಗಾರಿಗಳು ಯಾವ ಹಂತದಲ್ಲಿವೆ,

ಆ) ಇದರ ಅಂದಾಜು ವೆಚ್ಚವೆಷ್ಟು,

ಇ) ನಿಗದಿಪಡಿಸಿದ ಅನುದಾನವೆಷ್ಟು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಭದ್ರಾ ಆಧುನೀಕರಣ ಯೋಜನೆಯ ಅಂದಾಜು ವೆಚ್ಚ ರೂ 471 00 ಕೋಟಿಗಳು, ಈ ಆಧುನೀಕರಣ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲು ಯೋಜಿಸಲಾಗಿದೆ

ಆ) 2005–06ನೇ ಸಾಲಿನಲ್ಲಿ ರೂ 12 30 ಕೋಟಿ ಮೊತ್ತದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ 2006–07ನೇ ಸಾಲಿನಲ್ಲಿ ರೂ 82 92 ಕೋಟಿ ಮೊತ್ತದ 674 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇದರಲ್ಲಿ 234 ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಉಳಿದ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ

ಇ) 2006–07ನೇ ಸಾಲಿನಲ್ಲಿ ಭದ್ರಾ ಆಧುನೀಕರಣ ಕಾಮಗಾರಿಗೆ ರೂ 45 15 ಕೋಟಿ ಅನುದಾನ ಒದಗಿಸಲಾಗಿದ್ದು ಈವರೆಗೆ ರೂ 14 96 ಕೋಟಿ ವೆಚ್ಚ ಮಾಡಲಾಗಿದೆ

996 (1114) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳಿಗೆ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆಯೇ,

ಆ) ಮಾಡಿದ್ದಲ್ಲಿ, 2006–07ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳಿಗೆ ಕಟ್ಟಡಗಳನ್ನು ಮಂಜೂರು ಮಾಡಲಾಗಿದೆಯೇ?